**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ. ಸಿ. ನಂ. 69/2023**

**ಚಾ.ಸಾಃ 1, ಫ್ರಾ.ಸಾಃ 1**

| | |
|---|---|
| ಸಾಕ್ಷಿದಾರನ ಹೆಸರು | ಹರಿಶ್ಚಂದ್ರ ಗೌಡ |
| ತಂದೆಯ ಹೆಸರು | ಬಲಿಯಪ್ಪ ಗೌಡ |
| ವಯಸ್ಸು | 32 ವರ್ಷಗಳು |
| ಉದ್ಯೋಗ | ಹಾರ್ಡವೇರ್ ಶಾಪ್, ಚಂದಾವರ |
| ವಾಸ್ತವ್ಯ | ಕೆಕ್ಕಾರ, ಹೊನ್ನಾವರ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 25-09-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿರುತ್ತೇನೆ.

ದಿನಾಂಕ 28-04-2023 ರಂದು ಸಂಜೆ 07-30 ಕ್ಕೆ ನಾನು ನನ್ನ ಹಾರ್ಡವೇರ್ ಶಾಪನ್ನು ಬಾಗಿಲು ಹಾಕಿಕೊಂಡು ನನಗೆ ಪರಿಚಯಸ್ಥರಾದ ಚಾಸಾ-6 ರವರ ಜೊತೆಯಲ್ಲಿ ಚಂದಾವರ ಅರೆಅಂಗಡಿ ರಸ್ತೆಯ ನೂರಾನಿ ಕ್ರಾಸ್ ಹತ್ತಿರ ಶಾ-ಮಿಲ್ ಎದುರಿಗೆ ಮಾತನಾಡುತ್ತಾ ನಿಂತಿದ್ದೆವು. ಆ ಸಮಯಕ್ಕೆ 1 ನೇ ಆರೋಪಿ ಹೊನ್ನಾವರದಿಂದ ಚಂದಾವರ ಕಡೆಗೆ ಒಂದು ಮೋಟಾರು ಸೈಕಲನಲ್ಲಿ ಬರುತ್ತಿದ್ದರು. ಅದೇ ಸಮಯಕ್ಕೆ ಗಣೇಶ ತಿಮ್ಮು ಗೌಡ ಎನ್ನುವವರು ಚಂದಾವರದಿಂದ ಹೊನ್ನಾವರ ಕಡೆಗೆ ಹೋಗುತ್ತಿದ್ದರು. ಆದರೆ ಆರೋಪಿ ಬೈಕನ್ನು ಅತಿವೇಗವಾಗಿ ಚಲಾಯಿಸಿಕೊಂಡು ಬಂದು ಬಲಬದಿಗೆ ಹೋಗಿ ಎದುರಿಗೆ ಬರುತ್ತಿದ್ದ ಗಣೇಶ ತಿಮ್ಮು ಗೌಡರವರ ಬೈಕಿಗೆ ಡಿಕ್ಕಿಪಡಿಸಿದರು. ತಕ್ಷಣ ಗಣೇಶ ತಿಮ್ಮು ಗೌಡ ರಸ್ತೆಯ ಮೇಲೆ ಬಿದ್ದರು. ನಂತರ ನಾವು ಅವರನ್ನು ಉಪಚರಿಸಿ ನೋಡಲಾಗಿ ಗಣೇಶ ಗೌಡರವರ ತಲೆಗೆ ಪೆಟ್ಟಾಗಿತ್ತು. ನಾನು ಆತನನ್ನು ಕುಮಟಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ನಂತರ ಆತನನ್ನು ಮಣಿಪಾಲ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾನು ಪೋಲೀಸ್ ಠಾಣೆಗೆ ಬಂದು ಅಪಘಾತ ಆಗಿದ್ದ ಬಗ್ಗೆ ದೂರು ನೀಡಿರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಮರುದಿನ ಪೋಲಿಸರು ನನ್ನನ್ನು ಅಪಘಾತ ಸ್ಥಳಕ್ಕೆ ಕರೆಸಿದ್ದು ಸ್ಥಳದಲ್ಲಿ ಪಂಚನಾಮೆ ಮಾಡಿ, ಒಂದು ಕಚ್ಚಾ ನಕಾಶೆ ತಯಾರಿಸಿರುತ್ತಾರೆ. ಸದರಿ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಪಂಚನಾಮೆಯ ಕಾಲಕ್ಕೆ ಚಾಸಾ-2 ಮತ್ತು 3 ರವರು ಹಾಜರಿದ್ದರು. ಪೋಲೀಸರು ಸ್ಥಳದ ಫೋಟೋ ತೆಗೆದಿರುತ್ತಾರೆ. ಸ್ಥಳ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ನೋಡುತ್ತಿದ್ದು ನಿಪಿ-3 ಎಂದು, ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ತೆಗೆದ ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ-4 ರಿಂದ 7 ಎಂದು ಗುರುತಿಸಲಾಯಿತು.

ಅದಾದ 2 ದಿನಗಳ ನಂತರ ಗಾಯಾಳು ಮೃತಪಟ್ಟ ವಿಚಾರ ತಿಳಿಯಿತು. ಈ ಬಗ್ಗೆ ಪೋಲಿಸರಿಗೆ ಮರು ಹೇಳಿಕೆ ನೀಡಿರುತ್ತೇನೆ. ಆರೋಪಿತನು ಬೈಕನ್ನು ವೇಗವಾಗಿ ಚಲಾಯಿಸಿ ಬಲಕ್ಕೆ ತೆಗೆದುಕೊಂಡಿದ್ದರಿಂದಲೇ ಆತನ ತಪ್ಪಿನಿಂದಲೇ ಅಪಘಾತವಾಗಿರುತ್ತದೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಗೈರು ಹಾಜರು, ಆರೋಪಿ ಸಮಯ ಕೋರಿದ್ದರಿಂದ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**